ಶ್ರೀ ಕೆ. ಎಚ್. ಹನುಮೇಗೌಡ.—ದೇಶದಲ್ಲಿ ಅವಶ್ಯವಿರುವಷ್ಟು ಯಾನಿನ ಮರಿಗಳನ್ನು ಒದಗಿದುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಿದ್ದೀರಿ ಮತ್ತು ಪಶ್ಚಿಮ ಬಂಗಾಳದಿಂದ ಸಹ ತರಿಸುತ್ತಿದ್ದೀರಿ. ಇದಕ್ಕಾಗಿ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೀರಿ. ಅದ್ದರಿಂದ ಈ ಸ್ಕೀಮನ್ನು ಆದಷ್ಟು ಜಾಗ್ರತೆಯಾಗಿ ಪೂರ್ತಿ ಮಾಡುವುದಕ್ಕೆ ಏನು ಕೊಂದರೆ ಇದೆ ?

ಶ್ರೀ ಕೆ. ಟಿ. ರಾಥೋಡ್.—ಇದಕ್ಕೆ ಮುಖ್ಯವಾದಂತಹ ಕಾರಣ ಹಣದ ಅಭಾವ. ಈ ಸಮಸ್ಯೆಯನ್ನು ಆದಷ್ಟು ಜಾಗ್ರತೆ ಬಗೆಹರಿಸುವ ನಲುವಾಗಿ ನಾಲ್ಕನೆಯ ಯೋಜನೆಯಲ್ಲಿ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಮತ್ತು ಮುಂದಿನ ಪಂಚವಾರ್ಷಿಕ ಯೋಜನೆಯಲ್ಲಿ ಎರಡೂವರೆ ಕೋಟಿಯಷ್ಟು ಹಣವನ್ನು ತೊಡಗಿಸಬೇಕೆಂದು ಅಂದಾಜು ಮಾಡಲಾಗಿದೆ. ಅಷ್ಟು ಹಣ ಲಭ್ಯವಾದರೆ ೫ನೇ ಯೋಜನೆ ಮುಗಿಯುವುದರೊಳಗೆ ನಮಗೆ ಬೇಕಾಗುವಷ್ಟು ಯಾನಿನ ಮರಿಗಳನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತದೆ ಎಂದು ಅಂದಾಜು ಮಾಡಲಾಗಿದೆ.

ಶ್ರೀ ಎಸ್. ಬಂಗಾರಪ್ಪ.—ಈ ಫಾರ್ಮಿನಲ್ಲಿ ಉತ್ಪಾದನೆಯಾಗತಕ್ಕ ಯಾನಿನ ಮರಿಗಳು ನಮ್ಮ ರಾಜ್ಯದಲ್ಲರತಕ್ಕಂತಹ ಎರ್ಲಾ ಕೆರೆಗಳಿಗೆ ಮತ್ತು ಇತರ ಫಾರ್ಮುಗಳಿಗೆ ಸಾಕಾಗುವಷ್ಟು ಸಿಗುತ್ತವೆಯೇ ಮತ್ತು ಹಾಗಿದ್ದರೆ ಅದು ಎಷ್ಟು ವರ್ಷಗಳಲ್ಲಿ ಪೂರೈಸಲು ಸಾಧ್ಯವಾಗುತ್ತದೆ ?

ಶ್ರೀ ಕೆ. ಟಿ. ರಾಥೋಡ್.—ನಮ್ಮ ಪ್ರಾಂತ್ಯಕ್ಕೆ ಬೇಕಾಗಿರತಕ್ಕದ್ದು 15 ರಿಂದ 20 ಕೋಟಿಯಷ್ಟು ಯಾನಿನ ಮರಿಗಳು. ಸದ್ಯದ ನಮ್ಮ ಯೋಜನೆಗಳ ಪ್ರಕಾರ ನಮಗೆ ಲಭ್ಯವಾಗತಕ್ಕಂತಹ ಯೀನಿನ ಮರಿಗಳು 3 ಕೋಟಿ ಮಾತ್ರ. ಅಧಕ್ಕೆ ದೊಡ್ಡ ದೊಡ್ಡ ಫಾರ್ಮಿನಲ್ಲಿ ಇಂತಹ ಯಾನಿನ ಮರಿಗಳನ್ನು ಸಾಕುವುದಕ್ಕೆ ಕಾರ್ಯಕ್ರಮ ಹಾಕಿಕೊಂಡರೆ ಮುಂದಿನ ಪಂಚವಾರ್ಷಿಕ ಯೋಜನೆಯಲ್ಲಿ ಅದನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ.

Shifting of Defence Establishments

567. Sri K. R. SRINIVASULU NAYUDU (Shanthinagar).—

Will the Chief Minister be pleased to state.—

whether there is any proposal before Government to recommend to the Centre to shift the various Defence Establishments and Military barracks situated within the Municipal limits of the Bangalore City Corporation to other areas like Jalahalli, Agaram Hunusemaranahalli, etc. ?

Sri D. DEVARAJ URS (Chief Minister).—No.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ನನ್ನ ಪ್ರಶ್ನೆಗೆ ಉತ್ತರವಾಗಿ ಇಲ್ಲವೆಂದು ಹೇಳಿದ್ದೀರಿ. ನನ್ನ ಅನುಭವದಲ್ಲಿ ಹೇಳುವುದಾದರೆ ಈ ಮಿಲಿಟರಿ ಎಸ್ಟ್ಯಾಬ್ಲಿಸ್‌ಮೆಂಟ್‌ಗಳು ಸಿಟಿ ಮಧ್ಯ ಇರುವುದರಿಂದ ಕಂಟೋನ್‌ಮೆಂಟ್ ಮುಂತಾದ ಭಾಗಗಳ ಬೆಳವಣಿಗೆಗೆ ಕುಂಠಿತವಾಗುತ್ತಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

† ಶ್ರೀ ಡಿ. ದೇವರಾಜ ಅರಸ್.—ಅವರು ಕೇಳಿರುವ ಪ್ರಕಾರ ಪ್ರೊಪೋಸರ್ಸ್ ಏನೂ ಇಲ್ಲವೆಂದು ಹೇಳಿದೆ. ನಾವು ಅವರ ಹತ್ತಿರ ಮಾತನಾಡಿ ಕೇಳುತ್ತಿದ್ದೇವೆ. ಅವರು ಒಂದೆರಡು ಕಡೆ ಒಪ್ಪಿದ್ದಾರೆ. ಅದನ್ನು ಬಿಟ್ಟುಕೊಡುತೆ ವೆಂದು ಹೇಳಿದ್ದಾರೆ. ಬಾಕಿ ಉಳಿದವುಗಳ ಬಗ್ಗೆ ಏನೂ ಹೇಳಲ್ಲ.

ಶ್ರೀ ಕೆ. ಆರ್ ಶ್ರೀನಿವಾಸುಲು ನಾಯ್ಡು.—ಅನೇಕ ಕಡೆ ಬರೇ ಮೈದಾನಗಳು ಇವೆ. ಹಿಂದೆ ಬ್ರಿಟಿಷರ ಕಾಲದಲ್ಲಿ ಈ ರೀತಿ ಮಿಲಿಟರಿ ನೆಲೆಗಳು ಮಧ್ಯದಲ್ಲಿ ಇರಬೇಕಾಗಿತ್ತು. ಆದರೆ ಈಗ

ಬೇಕಾಗಿಲ್ಲ. ಈ ರೀತಿ ಇರುವುದರಿಂದ ಅವರು ಕೇಳಿದರೆ ಖಂಡಿತವಾಗಿಯೂ ಹೊರಗಡೆ ಹೋಗುತ್ತಾರೆ. ಆದ್ದರಿಂದ ಇದರ ಬಗ್ಗೆ ಕೇಂದ್ರಸರ್ಕಾರಕ್ಕೆ ಪತ್ರವ್ಯವಹಾರ ಮಾಡಿ, ಈ ಮಿಲಿಟರಿ ಇನ್‌ಸ್ಟಲೇಶನುಗಳನ್ನು ಹೊರಗಡೆ ಕಳುಹಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಇವೆಲ್ಲಾ ಕಾರ್ಪೊರೇಶನ್ ಲಿಮಿಟ್‌ನಲ್ಲಿ ಇದ್ದರೆ, ಕಾರ್ಪೊರೇಷನಿನವರು ಸರ್ಕಾರಕ್ಕೆ ಬರೆದಾಗ ಅವರ ಬಗ್ಗೆ ಮುಂದೆ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಅದಕ್ಕೆ ನಾನು ಸಲಹೆ ಮಾಡುವುದು, ಬೆಂಗಳೂರು ಕಾರ್ಪೊರೇಷನಿನವರು ಇದರ ಬಗ್ಗೆ ಏನು ಹೇಳುತ್ತಾರೆ ಎಂಬುದನ್ನು ತಿಳಿದುಕೊಳ್ಳಬೇಕು.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಮುಖ್ಯಮಂತ್ರಿಯವರು ಹೇಳಿದರು, ಕಾರ್ಪೊರೇಷನ್ ಲಿಮಿಟಿನಲ್ಲಿರುವ ಮಿಲಿಟರಿ ಇನ್‌ಸ್ಟಲೇಶನುಗಳನ್ನು ಹೊರಗಡೆ ವರ್ಗಾಯಿಸುವುದರ ಬಗ್ಗೆ ಕೆಲವಕ್ಕೆ ಅವರು ಒಪ್ಪಿದ್ದಾರೆ, ಕೆಲವಕ್ಕೆ ಒಪ್ಪಿಲ್ಲವೆಂದು ಹೇಳಿದ್ದಾರೆ. ಅವರು ಯಾವುದಕ್ಕೆ ಒಪ್ಪಿದ್ದಾರೆ, ಯಾವುದಕ್ಕೆ ಒಪ್ಪಿಲ್ಲವೆಂದು ಹೇಳುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಅವರು ಎರಡು ಜಾಗಗಳ ಬಗ್ಗೆ ಒಪ್ಪಿದ್ದಾರೆ. ಒಂದನೆಯದು ಕಾರ್ನರ್ ಹೌಸ್ ಬೌಂಡೆಡ್ ಬೈ ಕ್ವೀನ್ಸ್ ರೋಡ್, ಮಹಾತ್ಮಾ ಗಾಂಧಿ ರೋಡ್, ಸ್ಯೆಂಟ್ ಮಾರ್ಕ್ಸ್ ರೋಡ್ ಮತ್ತು ಕಬ್ಬನ್ ರೋಡ್. ಆ ಮೇರೆ ಇನ್ನೊಂದು ಈಗ ಇರುವ ಏರೋನಾಟಿಕಲ್ ಡೆವಲಪ್‌ಮೆಂಟ್ ಎಸ್ಟೇಬ್ಲಿಷ್‌ಮೆಂಟ್ ಶಿಫ್ಟ್ ಮಾಡುವುದಕ್ಕೆ ಒಪ್ಪಿದ್ದಾರೆ.

Planting of Road Side Trees

692. Sri P. M. BANGI (Jamkhandi).—

Will the Minister for Agriculture and Forests be pleased to state :—

(*a*) the number of pits dug for planting road-side trees on major District Roads, State and National High-ways during 1972-73 of the State (Talukwise information may be furnished) ;

(*b*) the total cost incurred by Government for digging these pits;

(*c*) the rate fixed for digging and forming each pit ;

(*d*) the number of pits in which avenue trees are planted, rearred and grown ?

Sri K. H. PATIL (Minister for Agriculture and Forests).—

(*a*) 1,56,872 pits. Please see statement appended.

(*b*) Rs. 8,18,034.

(*c*) The rate for digging and forming each pit inclusive of the protective trench mound alround varies from Rs. 3.78 to Rs. 5.99 depending upon the type of the soil. The total cost including earthwork, sowing on trench mound, planting including cost on transporting of 5 seedlings, and weeding charges varies from Rs. 4.14 to Rs. 6.35.